# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 771 |
| 2 | ಸದಸ್ಯರ ಹೆಸರು | : ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : 26-12-2022 |
| 4 | ಉತ್ತರಿಸುವ ಸಚಿವರು | : ಗೃಹ ಸಚಿವರು |

<table>
<tr><th>ಪ್ರಶ್ನೆ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಪೊಲೀಸರ ಮುಂಬಡ್ತಿ ಸಲುವಾಗಿ ಕೊಟ್ಟಿರುವ ಗೃಹ ಇಲಾಖೆ ಕಡತ ಸಂಖ್ಯೆ:33.4.2741/2021-ಹೆಚ್‌ಡಿಆರ್ ಯು 1 ಯಾವ ಹಂತದಲ್ಲಿದೆ; ವಿಳಂಬವಾಗಲು ಕಾರಣವೇನು;</td><td>ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಪೊಲೀಸರ ಮುಂಬಡ್ತಿ ಸಲುವಾಗಿ ಕೊಟ್ಟಿರುವ ಪತ್ರವನ್ನು ಸ್ವೀಕರಿಸಲಾಗಿದೆ. ಸದರಿ ಪತ್ರ ಪರಿಶೀಲಿಸಲಾಗಿದ್ದು, ಪತ್ರದಲ್ಲಿ ತಿಳಿಸಿರುವ ಅಂಶಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆ ಇಲಾಖೆಯ ಮುಂದೆ ಇರುವುದಿಲ್ಲ.</td></tr>
<tr><td>(ಆ)</td><td>ರಾಜ್ಯದಲ್ಲಿ ನಾಗರೀಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; ಸದರಿ ಹುದ್ದೆಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳ ಸಂಖ್ಯೆ ಎಷ್ಟು;(ಬೆಂಗಳೂರು ಹಾಗೂ ಪ್ರತ್ಯೇಕ ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)</td><td><table><tr><th>ಪಿ.ಎಸ್.ಐ ಒಟ್ಟು ಹುದ್ದೆಗಳ ಸಂಖ್ಯೆ</th><th>ನೇರ ನೇಮಕಾತಿ (70%)</th><th>ಮುಂಬಡ್ತಿ (30%)</th></tr><tr><td>3596</td><td>2517</td><td>1079</td></tr></table><br>ಸಂಪೂರ್ಣ ಮಾಹಿತಿ ಅನುಬಂಧ – ಅ ರಲ್ಲಿ ಲಗತ್ತಿಸಿದೆ.</td></tr>
<tr><td>(ಇ)</td><td>ಪೊಲೀಸ್ ಇಲಾಖೆಯಲ್ಲಿ ಪಿ.ಎಸ್.ಐ ಹುದ್ದೆಗಳ ಶೇಕಡಾವಾರು 70:30 ಅನುಪಾತವಿದ್ದು, ಬೇರೆ ಇಲಾಖೆಗಳಲ್ಲಿ 50:50 ಅನುಪಾತವಿದ್ದು, ಈ ತಾರತಮ್ಯವನ್ನು ಸರಿಪಡಿಸಲು ಸಾಧ್ಯವೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?(ಸಂಪೂರ್ಣ ಮಾಹಿತಿ ನೀಡುವುದು)</td><td>ಇತರೆ ಇಲಾಖೆಗಳಲ್ಲಿನ ಹುದ್ದೆಗಳನ್ನು ಹೊಂದಿರುವ ಲಿಪಿಕ ಸಿಬ್ಬಂದಿಗಳಾದ ದ್ವಿ.ದ.ಸ/ಪ್ರ.ದ.ಸ ಹಾಗೂ ಇತರೆ ಸಮಾನಾಂತರ ನೇಮಕಾತಿ ಹಾಗೂ ಮುಂಬಡ್ತಿ ಹುದ್ದೆಗಳಿಗೆ ಶೇಕಡ 50:50ರ ಅನುಪಾತ ನಿಗಧಿಪಡಿಸಲಾಗಿರುತ್ತದೆ.<br>ಪಿ.ಎಸ್.ಐ(ಸಿವಿಲ್) ಹುದ್ದೆಯು ಪೊಲೀಸ್ ಇಲಾಖೆಯಲ್ಲಿ ಪ್ರಮುಖ ಹುದ್ದೆಯಾಗಿದ್ದು, ಸಂಬಂಧಪಟ್ಟ ಠಾಣಾ ವ್ಯಾಪ್ತಿಯ ಸಂಪೂರ್ಣ ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆ, ಅಪರಾಧ ತಡೆಗಟ್ಟುವಿಕೆ, ಅಪರಾಧ ಪ್ರಕರಣಗಳ ಪತ್ತೆ ಮತ್ತು ತನಿಖೆ ಇವರ ಮುಖ್ಯ ಕರ್ತವ್ಯವಾಗಿರುತ್ತದೆ. ಈ ಕರ್ತವ್ಯಗಳನ್ನು ನಿರ್ವಹಿಸಲು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾದ ಹಾಗೂ ತಾಂತ್ರಿಕ ನೈಪುಣ್ಯತೆಯುಳ್ಳ ಯುವ ಅಧಿಕಾರಿಗಳ ಅವಶ್ಯಕತೆ ಇರುತ್ತದೆ.<br><br>ಸಾಮಾನ್ಯವಾಗಿ ಪಿ.ಎಸ್.ಐ(ಸಿವಿಲ್) ಹುದ್ದೆಗೆ ಮುಂಬಡ್ತಿ ಹೊಂದುವವರ ವಯಸ್ಸು ಕನಿಷ್ಠ 45 ವರ್ಷಗಳಿಗೆ ಮೇಲ್ಪಟ್ಟವರಾಗಿದ್ದು, ಇವರ ಶಿಕ್ಷಣವು ಸಹ ಅವರ ಮೂಲ ಹುದ್ದೆಯ ಕನಿಷ್ಠ ಮಟ್ಟದ್ದಾಗಿರುತ್ತದೆ. ಆದರೆ, ಕೆಲವು ಸಂದರ್ಭಗಳಲ್ಲಿ ಅವರುಗಳ ಅನುಭವವು ಸಹ ತನಿಖೆಗೆ ಬೇಕಾಗಿದ್ದರೂ ಸಹ ಇತ್ತೀಚಿನ ದಿನಗಳಲ್ಲಿ ಅಪರಾಧ ಪ್ರಕರಣಗಳು ಹೆಚ್ಚಿನ ತಾಂತ್ರಿಕತೆಯಿಂದ ಕೂಡಿದ್ದು, ಇಂತಹ ಪ್ರಕರಣಗಳ ಪತ್ತೆಗೆ ಹೆಚ್ಚಿನ ತಾಂತ್ರಿಕ ವಿದ್ಯಾರ್ಹತೆಯುಳ್ಳ ಯುವಕರ ಅವಶ್ಯಕತೆ ಇರುವುದರಿಂದ ಶೇಖಡ 70:30ರ ಅನುಪಾತ ನಿಗಧಿಪಡಿಸಲಾಗಿದೆ.</td></tr>
</table>

| | | |
|---|---|---|
| | | ಅಲ್ಲದೇ, 50:50 ಅನುಪಾತ ನಿಗಧಿಪಡಿಸಲು ಶೇಕಡಾ 50 ರಲ್ಲಿ 25% ಮಹಿಳಾ, 10% ಸೇವಾನಿರತ ಮತ್ತು ಉಳಿದ 15% ಸಾಮಾನ್ಯ ನೇಮಕಾತಿ ಮಾಡಿ 50% ಮುಂಬಡ್ತಿ ನೀಡಿದಲ್ಲಿ ಯುವಕರು ನೇಮಕಾತಿಯಿಂದ ವಂಚಿತರಾಗುತ್ತಾರೆ. ಪೊಲೀಸ್ ಇಲಾಖೆಯಲ್ಲಿ ಇತರೆ ಇಲಾಖೆಗಳಂತೆ 50:50ರ ಅನುಪಾತದಲ್ಲಿ ನಿಗಧಿಗೊಳಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: ಒಇ 170 ಪಿಇಐ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

# ಅನುಬಂಧ – ಅ

| ಕ್ರ.ಸಂ. | ಘಟಕ/ವಲಯ/ಕಮೀಷನರೇಟ್ | ಮಂಜೂರಾತಿ ಬಲ | 70% | 30% |
|---|---|---|---|---|
| 1 | ಬೆಂಗಳೂರು ನಗರ | 1171 | 820 | 351 |
| 2 | ಮೈಸೂರು ನಗರ | 69 | 48 | 21 |
| 3 | ಮಂಗಳೂರುನಗರ | 78 | 55 | 23 |
| 4 | ಹುಬ್ಬಳ್ಳಿ–ಧಾರವಾಡ ನಗರ | 54 | 38 | 16 |
| 5 | ಬೆಳಗಾವಿ ನಗರ | 49 | 34 | 15 |
| 6 | ಕಲಬುರಗಿ ನಗರ | 38 | 27 | 11 |
| | ಕೇಂದ್ರವಲಯ, ಬೆಂಗಳೂರು | 397 | 278 | 119 |
| 7 | ಬೆಂಗಳೂರು ಜಿಲ್ಲೆ | 82 | – | – |
| 8 | ತುಮಕೂರು | 93 | – | – |
| 9 | ಕೋಲಾರ | 41 | – | – |
| 10 | ರಾಮನಗರ | 62 | – | – |
| 11 | ಚಿಕ್ಕಬಳ್ಳಾಪುರ | 49 | – | – |
| 12 | ಕೆ.ಜಿ.ಎಫ್ | 25 | – | – |
| 13 | ವಿಶೇಷ ಘಟಕಗಳು | 45 | – | – |
| | ಪೂರ್ವವಲಯ, ದಾವಣಗೆರೆ | 295 | 207 | 88 |
| 14 | ದಾವಣಗೆರೆ | 63 | – | – |
| 15 | ಶಿವಮೊಗ್ಗ | 96 | – | – |
| 16 | ಚಿತ್ರದುರ್ಗ | 67 | – | – |
| 17 | ಹಾವೇರಿ | 53 | – | – |
| 18 | ವಿಶೇಷ ಘಟಕಗಳು | 16 | – | – |
| | ಪಶ್ಚಿಮವಲಯ, ಮಂಗಳೂರು. | 292 | 204 | 88 |
| 19 | ಡಿ.ಕೆ.ಮಂಗಳೂರು | 50 | – | – |
| 20 | ಉಡುಪಿ | 51 | – | – |
| 21 | ಯು.ಕೆ.ಕಾರವಾರ | 73 | – | – |
| 22 | ಚಿಕ್ಕಮಗಳೂರು | 71 | – | – |
| 23 | ವಿಶೇಷ ಘಟಕಗಳು | 47 | – | – |
| | ಉತ್ತರವಲಯ, ಬೆಳಗಾವಿ. | 312 | 218 | 94 |
| 24 | ಬೆಳಗಾವಿ | 100 | – | – |
| 25 | ಗದಗ | 37 | – | – |
| 26 | ದಾರವಾಡ | 29 | – | – |
| 27 | ವಿಜಯಪುರ | 65 | – | – |
| 28 | ಬಾಗಲಕೋಟೆ | 51 | – | – |
| 29 | ವಿಶೇಷ ಘಟಕಗಳು | 30 | – | – |
| | ದಕ್ಷಿಣವಲಯ, ಮೈಸೂರು | 374 | 262 | 112 |
| 30 | ಮೈಸೂರು | 85 | – | – |
| 31 | ಚಾಮರಾಜನಗರ | 51 | – | – |
| 32 | ಹಾಸನ | 91 | – | – |
| 33 | ಕೊಡಗು | 50 | – | – |
| 34 | ಮಂಡ್ಯ | 97 | – | – |
| | ಈಶಾನ್ಯವಲಯ, ಕಲಬುರಗಿ | 209 | 146 | 63 |
| 35 | ಕಲಬುರಗಿ | 60 | – | – |
| 36 | ಬೀದರ್ | 78 | – | – |
| 37 | ಯಾದಗಿರಿ | 40 | – | – |
| 38 | ವಿಶೇಷ ಘಟಕಗಳು | 31 | – | – |
| | ಬಳ್ಳಾರಿ ವಲಯ, ಬಳ್ಳಾರಿ | 219 | 153 | 66 |

| | | | | |
|---|---|---|---|---|
| 39 | ರಾಯಚೂರು | 67 | – | – |
| 40 | ಕೊಪ್ಪಳ | 44 | – | – |
| 41 | ಬಳ್ಳಾರಿ | 47 | – | – |
| 42 | ವಿಜಯನಗರ | 50 | – | – |
| 43 | ವಿಶೇಷ ಘಟಕಗಳು | 11 | – | – |
| 44 | ರೈಲ್ವೇಸ್, ಬೆಂಗಳೂರು. | 39 | 22 | 17 |